## **ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಚಿಕ್ಕಮಗಳೂರು**

**ಸೆಷನ್ಸ್ ಕೇಸ್ ನಂ.62ಃ2019**

ಫಿರ್ಯಾದುದಾರರು                    ರಾಜ್ಯದ ಪರವಾಗಿ ಕೊಪ್ಪ ಪೋಲೀಸ್.

ವಿರುದ್ಧ

ಆರೋಪಿತರು                    ದೊರೆಸ್ವಾಮಿ ಮತ್ತು ಇತರರು.

**ದೋಷಾರೋಪಣೆ**

ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಉಮೇಶ್ ಎಂ. ಅಡಿಗ, ಬಿ.ಕಾಂ., ಎಲ್.ಎಲ್.ಬಿ.( ಸ್ಪೆಷಲ್), ಆದ ನಾನು

1. ದೊರೆಸ್ವಾಮಿ, ಬಿನ್ ಚಲ್ಲಾಮುತ್ತು, 46 ವರ್ಷ, ಕೂಲಿ ಕೆಲಸ, ವಾಸಃ ಹನುಮಾನ ನಗರ, ಬಿಂತ್ರವಳ್ಳಿ ಗ್ರಾಮ, ಕೊಪ್ಪ ತಾಲ್ಲೂಕು. ಹಾಲಿ ವಾಸಃ ಅರಳಿಮಠ, ತೀರ್ಥಹಳ್ಳಿ.
2. ವಿಠಲ ಬಿನ್ ಸೀನಾ ಪೂಜಾರಿ, 41 ವರ್ಷ, ಕೂಲಿ ಕೆಲಸ, ವಾಸಃ ಕೊರಡಿ ಹಿತ್ತಲು, ನುಗ್ಗಿ ಗ್ರಾಮ, ಕೊಪ್ಪ ತಾಲ್ಲೂಕು.
3. ಡೇವಿಡ್ ಸಚಿನ್ ಲೋಬೊ ಬಿನ್ ವೆಲೇರಿಯನ್ ಲೋಬೊ, 27 ವರ್ಷ, ಕೂಲಿ ಕೆಲಸ, ವಾಸಃ ದೇವನ್ ಎಸ್ಟೇಟ್, ನುಗ್ಗಿ ಗ್ರಾಮ, ಕೊಪ್ಪ ತಾಲ್ಲೂಕು.

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ:29-1-2019 ರಂದು ನೀವು 1 ರಿಂದ 3 ನೇ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಸೇರಿಕೊಂಡು, ಕೊಪ್ಪ ತಾಲ್ಲೂಕು ಬಿಂತ್ರವಳ್ಳಿ ಗ್ರಾಮದ ಹನುಮಾನ ನಗರದಲ್ಲಿರುವ, ಚಾಸಾ-5 ಡಾ:ಮೋಹನಶೆಟ್ಟಿ ಇವರಿಗೆ ಸೇರಿದ ತೋಟದಲ್ಲಿ ಬೆಳೆದ ಶ್ರೀಗಂಧದ ಮರವನ್ನು, ಅದು ಶ್ರೀಗಂಧದ ಮರ ಅಂತ ಗೊತ್ತಿದ್ದೂ, ಕಡಿದುಹಾಕಿದ್ದು, ಕಾರಣ ನೀವೆಲ್ಲರೂ ಕರ್ನಾಟಕ ಅರಣ್ಯ ಕಾಯಿದೆ ಕಲಂ 86 ಸಹ ಕಲಂ ಭಾ.ದಂ.ಸಂ.34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಅಪಾದನೆ ಮಾಡಿದ್ದೇನೆ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 3 ನೇ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಸೇರಿಕೊಂಡು, ಚಾಸಾ-5 ಡಾ:ಮೋಹನಶೆಟ್ಟಿ ಇವರಿಗೆ ಸೇರಿದ ಜಮೀನಿನಲ್ಲಿ ಶ್ರೀಗಂಧದ ಮರವನ್ನು ಕಡಿದು, ಅದನ್ನು ಸಾಗಾಣಿಕೆ ಮಾಡುವ ಪ್ರಯತ್ನದಲ್ಲಿದ್ದಾಗ ಸಿಕ್ಕಿ ಬಿದ್ದಿದ್ದು, ನಿಮ್ಮ ಸ್ವಾಧೀನದಲ್ಲಿ ಸುಮಾರು ರೂ:8000-00 ಮೌಲ್ಯದ 8 ಕೆಜಿ ಶ್ರೀಗಂಧದ ಸ್ವಾಧೀನ ಹೊಂದಿದ್ದು, ಕಾರಣ ನೀವೆಲ್ಲರೂ ಕರ್ನಾಟಕ ಅರಣ್ಯ ಕಾಯಿದೆ ಕಲಂ 87 ಸಹ ಕಲಂ ಭಾ.ದಂ.ಸಂ.34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಅಪಾದನೆ ಮಾಡಿದ್ದೇನೆ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 3 ನೇ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಸೇರಿಕೊಂಡು, ಚಾಸಾ-5 ಡಾ:ಮೋಹನಶೆಟ್ಟಿ ಇವರ ತೋಟದಲ್ಲಿ ಬೆಳದ ಶ್ರೀಗಂಧದ ಮರವನ್ನು ಅಕ್ರಮವಾಗಿ ಅವರ ಅನುಮತಿ ಇಲ್ಲದೆ ಅಥವಾ ಸರ್ಕಾರದ ಪರವಾನಿಗೆ ಅಥವಾ ಅನುಮತಿ ಇಲ್ಲದೆ ಕಡಿದು ಮರವನ್ನು ಕಳ್ಳತನದಿಂದ ಸಾಗಿಸುತ್ತಿರುವಾಗ ಸಿಕ್ಕಿ

ಬಿದ್ದಿದ್ದು, ಕಾರಣ ನೀವೆಲ್ಲರೂ ಭಾ.ದಂ.ಸಂ.379 ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಅಪಾದನೆ ಮಾಡಿದ್ದೇನೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ದಿನಾಂಕ:18-2- 2020.

ಸಹಿ:-

( ಉಮೇಶ್ ಎಂ. ಅಡಿಗ),
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

ಕೆಟಿಪಿ